# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 339 (417)**
**ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ**
**(ನಾಮನಿರ್ದೇಶನ ಹೊಂದಿದ್ದವರು)**
**ಉತ್ತರಿಸಬೇಕಾದ ದಿನಾಂಕ : 18.07.2024**
**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಭಾರತದ ಜನಗಣತಿ ಕಾಯ್ದೆ 1948ರ ಪ್ರಕಾರ ಪ್ರತಿ 10 ವರ್ಷಗಳಿಗೊಮ್ಮೆ ದೇಶದಲ್ಲಿ ಕೈಗೊಳ್ಳುವ ಜನಗಣತಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆಯೇ: | ಕೇಂದ್ರ ಸರ್ಕಾರವು ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿಯನ್ನು ಕೈಗೊಳ್ಳಲು ಕಾಲಮಿತಿಯನ್ನು ನಿಗಧಿಪಡಿಸಿದ್ದು, ಅದರಂತೆ 2011 ನೇ ಸಾಲಿನಲ್ಲಿ ಕೊನೆ ಬಾರಿಗೆ ಜನಗಣತಿಯನ್ನು ಕೈಗೊಳ್ಳಲಾಗಿದೆ. ಆದರೆ, ಕೋವಿಡ್-19 ಸಾಂಕ್ರಾಮಿಕ ಸೋಂಕು ದೇಶದಾದ್ಯಂತ ಹರಡಿದ್ದರಿಂದ, 2021ನೇ ಸಾಲಿನಲ್ಲಿ ಜನಗಣತಿ ಕಾರ್ಯಾಚರಣೆಯನ್ನು ಕೇಂದ್ರ ಸರ್ಕಾರವು ಮುಂದೂಡಿರರುತ್ತದೆ ಹಾಗೂ ಮುಂದಿನ ದಿನಾಂಕವನ್ನು ಘೋಷಣೆ ಮಾಡಿರುವುದಿಲ್ಲ. |
| ಆ) | ಹಾಗಿದ್ದಲ್ಲಿ ಈ ಜನಗಣತಿ ಕೈಗೊಳ್ಳಲು ಅನುಸರಿಸಬೇಕಾದ ಪೂರ್ವಭಾವಿ ತಯಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ: (ಪೂರ್ಣ ಮಾಹಿತಿ ನೀಡುವುದು) | |
| ಇ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪೌರತ್ವ ಕಾಯಿದೆ-2019 ಮತ್ತು ಇದರಡಿ ರೂಪಿತವಾಗಿರುವ ನಿಯಮಗಳನ್ನು ಜಾರಿಗೊಲಿಸಲಾಗಿದೆಯೇ; | ಹೌದು. |
| ಈ) | ಹಾಗಿದ್ದಲ್ಲಿ ಈ ಕಾಯಿದೆ ಅಡಿ ಇದುವರೆಗೂ ಎಷ್ಟು ಅರ್ಹರಿಗೆ ಪೌರತ್ವ ನೀಡಲಾಗಿದೆ; | ಈ ಕಾಯ್ದೆಯಡಿ ಇದುವರೆಗೆ ಯಾರಿಗೂ ಪೌರತ್ವ ನೀಡಿರುವುದಿಲ್ಲ. |
| ಉ) | ರಾಜ್ಯದಲ್ಲಿ ಪೌರತ್ವ ಕಾಯಿದೆ ಅಡಿಯಲ್ಲಿ ರೂಪಿಸಿರುವಂತೆ ನಾಗರೀಕ ರಾಷ್ಟ್ರೀಯ ನೋಂದಣಿ (ಎನ್.ಆರ್.ಸಿ) ಮತ್ತು ರಾಷ್ಟ್ರೀಯ ಜನಸಂಖ್ಯೆ ರಿಜಿಸ್ಟರ್ (ಎನ್‌ಪಿಆರ್) ಗಳನ್ನು ಇಡಲಾಗಿದೆಯೇ: ಇಲ್ಲದಿದ್ದಲ್ಲಿ ಕಾರಣಗಳೇನು? (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ರಾಷ್ಟ್ರೀಯ ಜನಸಂಖ್ಯೆ ರಿಜಿಸ್ಟರ್ (ಎನ್‌ಪಿಆರ್) ಅನ್ನು 2010 ನೇ ಸಾಲಿನಲ್ಲಿ ತಯಾರಿಸಲಾಗಿದ್ದು, ಸದರಿ ರಿಜಿಸ್ಟರ್‌ಯನ್ನು 2015 ನೇ ಸಾಲಿನಲ್ಲಿ ಪರಿಷ್ಕರಿಸಲಾಗಿದೆ.<br><br>ನಾಗರೀಕ ರಾಷ್ಟ್ರೀಯ ನೋಂದಣಿ (ಎನ್.ಆರ್.ಸಿ) ತಯಾರಿಸುವ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದೇ ಸೂಚನೆ ಸ್ವೀಕೃತವಾಗಿರುವುದಿಲ್ಲ. |

**ಕಡತ ಸಂಖ್ಯೆ:** ಕಂಇ 329 ಟಿಎನ್‌ಆರ್ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು